**ಪಿ.ಡಬ್ಲ್ಯು-1**

ಫಿರ್ಯಾಧಿದಾರರನ್ನು ದಿನಾಂಕ 06-12-2024 ರಂದು ಕರೆದು ಪ್ರಮಾಣ ವಚನ ಮಾಡಿಸಲಾಯಿತು

**ಪಾಟೀಸವಾಲುಃ ಆರೋಪಿ ಪರ ಶ್ರೀ.ಎ ಎ ಎಂ ವಕೀಲರಿಂದಃ-**

ಆರೋಪಿ ಮತ್ತು ನಾನು ಒಂದೇ ಊರಿನವರು ಇದ್ದು ಬಹಳ ವರ್ಷಗಳಿಂದ ಪರಿಚಯ ಇರುತ್ತವೆ. ಆರೋಪಿ ರಿಯಲ್ ಎಸ್ಟೇಟ್ ಮತ್ತು ಕಾರ ಮಾರಾಟ ಮಾಡುವ ಕೆಲಸ ಮಾಡುತ್ತಾರೆ. ನಾನು ಸ್ವಂತವಾಗಿ ನೇಕಾರಿಕೆ ಉದ್ಯೋಗ ಮಾಡುತ್ತೇನೆ. ಮತ್ತು ನನ್ನ ಸಹೋದರರ ಜೊತೆ ಸದರಿ ಉದ್ಯೋಗ ಮಾಡುತ್ತೇನೆ. ಸುಮಾರು 07-08 ವರ್ಷಗಳಿಂದ ಅದನ್ನು ಮಾಡುತ್ತಿದ್ದೇನೆ. ಸದರಿ ಉದ್ಯೋಗ ಬಿಟ್ಟು ಬೇರೆ ಕೆಲಸ ಮಾಡುವದಿಲ್ಲ. ಅದರಿಂದ 40-60 ಸಾವಿರ ವರ್ಷಕ್ಕೆ ಆದಾಯ ಇರುತ್ತದೆ. ನನ್ನ ಕುಟುಂಬದಲ್ಲಿ ನಾನು ಮತ್ತು ನನ್ನ ಹೆಂಡತಿ ಇಬ್ಬರು ಇರುತ್ತೇವೆ. ಮಕ್ಕಳು ಇರುವದಿಲ್ಲ. ಮನೆ ಖರ್ಚು ತೆಗೆದು ಅಂದಾಜು ತಿಂಗಳಿಗೆ 10-15 ಸಾವಿರ ಉಳಿತಾಯ ಇರುತ್ತದೆ. ಸದರಿ ಆದಾಯದ ಮೂಲ ಹೊರತು ಪಡಿಸಿ ನನಗೆ ಮಹಾಲಿಂಗಪೂರದಲ್ಲಿ ಎರಡು ಪ್ಲಾಟಗಳು ಇದ್ದು, ವಿಸ್ತೀರ್ಣ 30X40 ಫೂಟ್ ಇರುತ್ತದೆ . ಒಂದು ಕಟ್ಟಡ ಇದ್ದು ಇನ್ನೊಂದು ಖುಲ್ಲಾ ಜಾಗೆ ಇರುತ್ತದೆ. ಅವುಗಳ ನಂಬರ ನನಗೆ ಹೇಳಲು ಬರುವದಿಲ್ಲ. ಪ್ಲಾಟಗಳ ದಾಖಲೆಗಳನ್ನು ಹಾಜರು ಮಾಡಿರುವದಿಲ್ಲ. ಅವುಗಳಲ್ಲಿ ಒಂದು ಖುಲ್ಲಾ ಪ್ಲಾಟನ್ನು ಮಾರಾಟ ಮಾಡಿರುತ್ತೇನೆ. ಅವುಗಳನ್ನು ನನ್ನ ಸ್ವಂತ ಉಳಿತಾಯದಿಂದ 03 ವರ್ಷಗಳ ಹಿಂದೆ ರೂಃ 6 ಲಕ್ಷ ಗಳಿಗೆ ಖರೀದಿ ಮಾಡಿರುತ್ತೇನೆ. 03 ವರ್ಷಗಳ ಹಿಂದೆ ಸದರಿ ಖುಲ್ಲಾ ಪ್ಲಾಟನ್ನು ನನ್ನ ಪ್ರಾಪಂಚಿಕ ಅಡಚಣೆ ಸಲುವಾಗಿ ಮಾರಾಟ ಮಾಡಿರುತ್ತೇನೆ. ರೂ 10 ಲಕ್ಷಗಳ ಅಡಚಣೆಗಾಗಿ ಪ್ಲಾಟ ನ್ನು ಮಾರಾಟ ಮಾಡಿರುತ್ತೇನೆ. ರೂಃ 5 ಲಕ್ಷ ಕ್ಕೆ ಸದರಿ ಪ್ಲಾಟ ನ್ನು ಮಹಾಲಿಂಗಪೂರದ ಮಹೇಶ ಮುಗಳಖೋಡ ಎನ್ನುವವರಿಗೆ ಮಾರಾಟ ಮಾಡಿರುತ್ತೇನೆ. ಸದರಿ ಮಾರಾಟ ದಿಂದ ಬಂದ ರೂ 5 ಲಕ್ಷ ವನ್ನು 10 ಲಕ್ಷಗಳ ಸಾಲಕ್ಕೆ ಕೊಟ್ಟು 05 ಲಕ್ಷ ಸಾಲವನ್ನು ತೀರಿಸಿರುತ್ತೇನೆ. ಇವತ್ತಿನವರೆಗೆ ಇನ್ನೂ 9 ಲಕ್ಷ ಸಾಲ ನನ್ನ ಮೇಲೆ ಇರುತ್ತದೆ. ರಬಕವಿಯ ಮಹಾನಿಂಗ ಮದರಖಂಡಿ ಇವರಿಗೆ ರೂಃ 6 ಲಕ್ಷ ಹಣ ಕೊಡಬೇಕಾಗಿರುತ್ತದೆ. ಸದರಿ ಹಣವನ್ನು ಅವರಿಂದ 04 ವರ್ಷಗಳ ಹಿಂದೆ ತೆಗೆದುಕೊಂಡಿರುತ್ತೇನೆ. ರಬಕವಿಯ ಶ್ರೀಶೈಲ ಮದರಖಂಡಿ ಇವರಿಗೆ ರೂಃ3 ಲಕ್ಷ ಹಣ ಕೊಡಬೇಕಾಗಿರುತ್ತದೆ. ಸದರಿ ಹಣವನ್ನು ಅವರಿಂದ 02 ವರ್ಷಗಳ ಹಿಂದೆ ತೆಗೆದುಕೊಂಡಿರುತ್ತೇನೆ. ಸದರಿಯವರು ಹಣವನ್ನು ಮರಳಿ ಕೇಳದ ಕಾರಣ ಅವುಗಳನ್ನು ಪಾವತಿ ಮಾಡಲು ಆಗಿರುವದಿಲ್ಲ.

ನನಗೆ ಸಂಬಂದಿಸಿದಂತೆ ಎರಡು ಬಾಂಕಗಳಲ್ಲಿ ಉಳಿತಾಯ ಖಾತೆ ಇರುತ್ತದೆ. ಸದರಿ ಖಾತೆಗಳಲ್ಲಿ ಮತ್ತು ನನ್ನ ಹತ್ತಿರ ಯಾವ ಕಾಲಕ್ಕೂ ರೂಃ 8 ಲಕ್ಷ ಹಣ ಇರುವದಿಲ್ಲ ಎಂದರೆ ಸರಿಯಲ್ಲ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರ್ಥಿಕವಾಗಿ ಸದೃಡ ಇರುವದಿಲ್ಲ ಎಂದರೆ ಸರಿಯಲ್ಲ. ನಾನು ಬೇರೆಯವರಿಗೆ ಸಾಲ ಪಾವತಿ ಮಾಡಬೇಕಾಗಿರುವದರಿಂದ ಆರೋಪಿಗೆ ಹಣವನ್ನು ಕೊಟ್ಟಿರುತ್ತೇನೆಂದು ಸುಳ್ಳು

ಹೇಳುತ್ತಿದ್ದೇನೆಂದರೆ ಸರಿಯಲ್ಲ. ಕೇಸನ್ನು ದಾಖಲ ಮಾಡುವ ಮೊದಲು ಆರೋಪಿಗೆ ನೋಟಿಸ ನೀಡಿದ್ದು ಅದಕ್ಕೆ ಆರೋಪಿ ಉತ್ತರವನ್ನು ಕೊಟ್ಟಿರುವದು ನನಗೆ ಗೊತ್ತಿರುತ್ತದೆ. ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿರುತ್ತದೆ. ಆರೋಪಿ ತನ್ನ ನೋಟಿಸದಲ್ಲಿ ಆತನ ಚಕ್ ಗಳು ಕಳುವಾಗಿದ್ದು, ನಾನು ಚಕ್ ಮೇಲೆ ಆರೋಪಿಯ ಸಹಿ ಮಾಡಿ ಬರ್ತಿ ಮಾಡಿ ದುರುಪಯೋಗ ಪಡಿಸಿಕೊಂಡು ಖೊಟ್ಟಿಯಾಗಿ ಕೇಸನ್ನು ದಾಖಲು ಮಾಡಿದ್ದು ಅದಕ್ಕೆ ಪೋಲಿಸರಿಗೆ ಪಿರ್ಯಾದಿ ಸಲ್ಲಿಸಿರುತ್ತೇನೆಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಆದರೆ ಅದು ಸುಳ್ಳು ಇರುತ್ತದೆ.

ಆರೋಪಿಗೆ ಹಣ ಕೊಟ್ಟೆ ಎಂದು ಹೇಳುವ ಕಾಲಕ್ಕೆ ಯಾರು ಸಾಕ್ಷಿದಾರರು ಇರುವದಿಲ್ಲ. ಆಗ ಆತನಿಂದ ಏನನ್ನು ಬರೆಸಿಕೊಂಡಿರುವದಿಲ್ಲ. ಆ ಕಾಲಕ್ಕೆ ಆರೋಪಿಯಿಂದ ಒಂದು ಚಕ್ ನ್ನು ತೆಗೆದುಕೊಂಡಿರುತ್ತೇನೆ. ಚಕ್ ಮೇಲೆ ರೂ 8 ಲಕ್ಷ ಎಂದು ಮಾತ್ರ ನಮೂದು ಮಾಡಿ ನನಗೆ ಕೊಟ್ಟಿದ್ದರು. ದಿನಾಂಕ 01-11-2022 ರಂದು ಆರೋಪಿಗೆ 08 ಲಕ್ಷ ಹಣವನ್ನು ಕೊಟ್ಟಿರುತ್ತೇನೆ. ನಾನು ಯಾವ ಕಾಲಕ್ಕೂ ಆರೋಪಿಗೆ 08 ಲಕ್ಷ ಹಣವನ್ನು ಕೊಟ್ಟಿರುವದಿಲ್ಲ ಎಂದರೆ ಸರಿಯಲ್ಲ. ಆತ ಯಾವ ಕಾಲಕ್ಕೂ ಹಣ ಕೇಳಲು ಬಂದಿರುವದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಯಾವುದೇ ಹಣದ ಅಡಚಣೆ ಇರಲಿಲ್ಲ ಎಂದರೆ ಸರಿಯಲ್ಲ. ಆತನ ಕಳುವಾದ ಚಕ್ ನನಗೆ ಸಿಕ್ಕಿದ್ದನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಪಿರ್ಯಾದಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
**ಪ್ರ.ದ.ನ್ಯಾ. ದಂ., ಬನಹಟ್ಟಿ.**